ಅನುಬಂಧ–1

972 ಶ್ರೀ ಪಾಟೀಲ್ ಬಿ ಆರ್ (ಆಳಂದ್) ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕಳೆದ 5 ವರ್ಷಗಳಲ್ಲಿ ಸ್ವಾಧೀನಪಡಿಸಿಕೊಳ್ಳಲು ನೋಟಿಫೈ ಮಾಡಿದ ಜಮೀನಿನ ಪೈಕಿ ಹತ್ತು ಎಕರೆಗೆ ಮೀರಿದ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ವಿನಾಯಿತಿ (Denotification) ಗಾಗಿ ಕೋರಿಕೆ ಸಲ್ಲಿಸಿದ ಅರ್ಜಿದಾರರು ಯಾರ್ಯಾರು (ವರ್ಷವಾರು, ವಿಸ್ತೀರ್ಣವಾರು ಮಾಹಿತಿ ನೀಡುವುದು)

ಆ) ಸ್ವಾಧೀನಪಡಿಸಿಕೊಂಡ ಜಮೀನನ್ನು ಡಿನೋಟಿಫಿಕೇಷನ್ ಮೂಲಕ ವಾಪಸ್ಸು ಪಡೆದ ಸಂಸ್ಥೆಗಳಾವುವು ಮತ್ತು ವ್ಯಕ್ತಿಗಳಾರು (ವಿಸ್ತೀರ್ಣವಾರು ಮಾಹಿತಿ ನೀಡುವುದು),

ಇ) ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲು ಕಾರಣಗಳೇನು, ಹಾಗೂ ಉದ್ದೇಶವೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು),

ಅ) ಕಳೆದ 5 ವರ್ಷಗಳಲ್ಲಿ ಸ್ವೀಕೃತವಾದ ಕೋರಿಕೆಯ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ

ಆ) ಮತ್ತು (ಇ) ವಿವರಗಳು ಹಾಗೂ ಕಾರಣಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ

ಅನುಬಂಧ–1

ಕಳೆದ ಐದು ವರ್ಷಗಳಲ್ಲಿ 10 ಎಕರೆಗಿಂತ ಅಧಿಕ ಜಮೀನು ಭೂಸ್ವಾಧೀನದಿಂದ ಕೈಬಿಡಲು ಕೋರಲಾದ ಮನವಿಗಳ ವಿವರ

ಅರ್ಜಿದಾರರು	ವರ್ಷ 2002–2003	ಗ್ರಾಮದ ಹೆಸರು ಇಲ್ಲ	ಸರ್ವೆ ನಂ ಇಲ್ಲ	ವಿಸ್ತೀರ್ಣ ಇಲ್ಲ
1) ಹೆಚ್ ಜಯಣ್ಣ ಮತ್ತು ಮಂಜುನಾಥ್	2004	ಕೊತ್ತನೂರು	26/4 ಮತ್ತು 29	11–02
2) ಕೆ ಐ ಎ ಡಿ ಬಿ ಬೆಂಗಳೂರು	2004	ಅಗರ	6/1 ರಿಂದ 55 ವರೆಗೆ	110–00

3) ರಂಗಮ್ಮ ಕೋಂ ಕೃಷ್ಣಪ್ಪ ಮತ್ತು ಇತರರು	2004	ಸಜ್ಜೇಪಾಳ್ಯ	8,13	21–16
4) ವಿ ಕೃಷ್ಣಮೂರ್ತಿ	2004	ಉಲ್ಲಾಳು	14 ರಿಂದ 23 ವರೆಗೆ	23–28
5) ಎಸ್ ಬಿ ನಂಜುಂಡಯ್ಯ ಮತ್ತಿತರರು	2004	ಉತ್ತರಹಳ್ಳಿ	54/2, 54/3ಎ 59/2,60,61/1, 65,67, 68, 59,70/2,73	42–18
6) ಎಂ ಯು ಕಾಮತ್ ಎಂ ಯು ಉಮಾಕಾಮತ್, ಬಿ ಎನ್ ಸುಧಾ	2004–05	ಉತ್ತರಹಳ್ಳಿ	88/2,88/3	10–23
7) ಕೆ ವಿ ನಾರಾಯಣಸ್ವಾಮಿ	2005	ಹೊಸಹಳ್ಳಿ	22,24/1,24/2	10–17
8) ಮೆ,ನಾರ್ಲ್ಯಾಂಡ್ ಇನೆವೆಸ್ಟ್‌ಮೆಂಟ್	2006	ನಾಗವಾರ	60/12	33–07
9) ಆರ್ ಶ್ರೀರಾಮ್ ಮತ್ತು ಇತರರು	2005	ರಘುವನ ಪಾಳ್ಯ	29 ರಿಂದ 35, 36 ವರೆಗೆ	13–32

ಅನುಬಂಧ–2

ಭೂಸ್ವಾಧೀನದಿಂದ ಕೈಬಿಡಲಾದ ಜಮೀನುಗಳ ವಿವರ ಹಾಗೂ ಕಾರಣಗಳು

ಅರ್ಜಿದಾರರು	ವರ್ಷ	ಗ್ರಾಮದ ಹೆಸರು	ಸರ್ವೆ ನಂ	ವಿಸ್ತೀರ್ಣ	ಭೂಸ್ವಾಧೀನದಿಂದ ಕೈಬಿಡಲು ಕಾರಣ
1) ಹೆಚ್ ಜಯಣ್ಣ ಮತ್ತು ಮಂಜುನಾಥ್	2004	ಕೊತ್ತನೂರು	26/4 ಮತ್ತು 29	11–02	ಕೊತ್ತನೂರು ಗ್ರಾಮದ ಸರ್ವೆ ನಂ 26/4 ಮತ್ತು 29ರ ಒಟ್ಟು ವಿಸ್ತೀರ್ಣ 11 ಎಕರೆ 02 ಗುಂಟೆ ಜಮೀನಿನಲ್ಲಿ ಇಟ್ಟಿಗೆ ಕಾರ್ಖಾನೆ, ಮಾವಿನ ತೋಟ,

					ವಾಸದ ಮನೆಗಳು ಮತ್ತು ಕೆಸಲಗಾರರ ಷೆಡ್ಡ್ ಗಳು ಇದ್ದ ಕಾರಣ, ಸರ್ಕಾರದ ಆದೇಶ ಸಂಖ್ಯೆಯುಡಿಡಿ 341 ಎಂಎನ್ ಎಕ್ಸ್ 2001, ದಿನಾಂಕ 14 7 2004 ರಲ್ಲಿ ಭೂಸ್ವಾಧೀನದಿಂದ ಕೈಬಿಡಲು ಆದೇಶವಾಗಿರುತ್ತದೆ
2) ಕೆಐಎಡಿಬಿ 2004 ಬೆಂಗಳೂರು	2004	ಅಗರ	6/1 ರಿಂದ 55 ವರೆಗೆ	110–00	ಅಗರ ಗ್ರಾಮದ ಸರ್ವೆ ನಂ 6 ರಿಂದ 55 ರವರೆಗೆ ಒಟ್ಟು 110–00 ಎಕರೆ ಜಮೀನು ಕೆಐಎಡಿಬಿ ರವರ ಪರವಾಗಿ ಭೂಸ್ವಾಧೀನವಾಗಿದ್ದ ಕಾರಣ, ಸರ್ಕಾರದ ಆದೇಶ ಸಂಖ್ಯೆಯುಡಿಬಿ 64 ಎಂಎನ್ಎಕ್ಸ್ 2004, ದಿನಾಂಕ 10–2–2004 ರಲ್ಲಿ ಭೂಸ್ವಾಧೀನದಿಂದ ಕೈಬಿಡಲು ಆದೇಶವಾಗಿರುತ್ತದೆ

3) ವಿ ಕೃಷ್ಣಮೂರ್ತಿ	2004	ಉಲ್ಲಾಳು	14 ರಿಂದ 23 ವರೆಗೆ	23–28	ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 42483–517/02 ಮತ್ತಿತರ ಪ್ರಕರಣಗಳಲ್ಲಿ ದಿನಾಂಕ 30–9–2004 ರ ಆದೇಶದಲ್ಲಿನ ಮಾರ್ಗ ಸೂಚಿಗಳಡಿ ಬರುವುದರಿಂದ ಸರ್ ಎಂ ವಿಶ್ವೇಶ್ವರಯ್ಯ ಬಡಾವಣೆಗೆ ಭೂ ಸ್ವಾಧೀನಪಡಿಸಿಕೊಂಡಿದ್ದ ಉಲ್ಲಾಳು ಗ್ರಾಮದ ಸರ್ವೆ ನಂ 14 ರಿಂದ 23 ಮತ್ತು 51 ರಿಂದ 53 ರವರೆಗಿನ ಸರ್ವೆ ನಂಬರುಗಳಲ್ಲಿ 23 ಎಕರೆ 28 ಗುಂಟೆ ಜಮೀನನ್ನು ರಸ್ತೆಗೆ ಬೇಕಿರುವ 4–00 ಎಕರೆ ಜಮೀನನ್ನು ಉಳಿಕೆ ಜಮೀನನ್ನು ಭೂಸ್ವಾಧೀನದಿಂದ ಕೈಬಿಡಲು ಹಾಗೂ ಭೂಸ್ವಾಧೀನ ಕಾಯ್ದೆ ಸೆಕ್ಷನ್ 48(1) ರಡಿ ಅಧಿಸೂಚನೆ ಹೊರಡಿಸಲು ಸರ್ಕಾರವನ್ನು ಕೋರಲು ಪ್ರಾಧಿಕಾರವು ವಿಷಯ

					ಸಂಖ್ಯೆ.126/05 ರಲ್ಲಿ ದಿನಾಂಕ 27–8–2005 ರಂದು ತೀರ್ಮಾನಿಸಿರುತ್ತದೆ
4) ಎಸ್ ಬಿ ನಂಜುಂಡಯ್ಯ ಮತ್ತು ಇತರರು	2004	ಉತ್ತರಹಳ್ಳಿ ಮಾರಸಂದ್ರ ಚನ್ನಸಂದ್ರ	54/2 54/3 ಎ 59/2, 6061/ 1 65,67 68,69 70/2 73, 9/1 14/1 27	42– 18	ಉತ್ತರಹಳ್ಳಿ ಗ್ರಾಮದ ಸರ್ವೆ ನಂ 54/2, 54/3ಎ ,59/2 60,61/1 65, 67, 68, 69, 70/2,73 ಮಾರಸಂಸ್ರ ಗ್ರಾಮದ ಸರ್ವೆ ನಂ 9/1, 14/1, ಚನ್ನಸಂದ್ರ ಗ್ರಾಮದ ಸರ್ವೆ ನಂ 27ರ ಒಟ್ಟು 42 ಎಕರೆ 18 ಗುಂಟೆ ಜಮೀನುಗಳಲ್ಲಿ ಮೆ, ಕೃಷ್ಣ ಸ್ಪಿನ್ನಿಂಗ್ ಮತ್ತು ವೀವಿಂಗ್ ಮಿಲ್ಸ್ ಲಿಮಿಟೆಡ್ ರವರಗೆ ಸೇರಿದಂತೆ ಸ್ಪಿನ್ನಿಂಗ್ ಮಿಲ್ ನಡೆಯುತ್ತಿದ್ದು ಇದರಲ್ಲಿ ಫ್ಯಾಕ್ಟರೀಸ್, ಬಾಯ್ಲರ್ ಹೌಸ್, ವೀವರ್ಸ್ ಹೌಸ್ ಆಡಳಿತ ಕಟೇರಿ, ಟ್ರೀಟ್‌ಮೆಂಟ್ ಪ್ಲಾಂಟ್ಸ್, ಗಾರ್ಡನ್ ಕ್ರಾಪ್ಸ್, ಲೇಬರ್ ಕ್ವಾಟರ್ಸ್, ಸ್ಕೂಲ್ ಬಿಲ್ಡಿಂಗ್ ನಿಂದ ಅಭಿವೃದ್ಧಿ ಹೊಂದಿದ್ದು,

					ಈ ಜಮೀನಿನಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲು ಸಾಧ್ಯವಾಗದ ಕಾರಣಕ್ಕಾಗಿ ಸರ್ಕಾರದ ಆದೇಶ ಸಂಖ್ಯೆಯುಡಿಡಿ 466 ಎಂಎನ್‌ಎಕ್ಸ್ 2000, ದಿನಾಂಕ 7–5–2004 ರಲ್ಲಿ ಭೂಸ್ವಾಧೀನದಿಂದ ಕೈಬಿಡಲು ಆದೇಶವಾಗಿರುತ್ತದೆ
5) ರಂಗಮ್ಮ ಕೋಳಿ ಕೃಷ್ಣಪ್ಪ ಮತ್ತು ಇತರರು	2004	ಸಜ್ಜೇಪಾಳ್ಯ	8,13	21–16	ಸಜ್ಜೇಪಾಳ್ಯ ಗ್ರಾಮದ ಸರ್ವೆ ನಂ 8 ಮತ್ತು 13 ಜಮೀನು ಗಳಲ್ಲಿ ಆರ್ ಸಿ ಸಿ ಕಟ್ಟಡಗಳು, ಮನೆಗಳು ಇದ್ದು, ವಸತಿ ಪ್ರದೇಶವಾಗಿ ಈಗಾಗಲೇ ಅಭಿವೃದ್ಧಿ ಹೊಂದಿರುವುದರಿಂದ ಬಡಾವಣೆ ರಚಿಸಲು ಸಾಧ್ಯವಾಗದ ಕಾರಣಕ್ಕಾಗಿ ಸರ್ಕಾರದ ಆದೇಶ ಸಂಖ್ಯೆಯುಡಿಡಿ 309 ಎಂಎನ್‌ಎಕ್ಸ್ 2001, ದಿನಾಂಕ 5–1–2005 ರಲ್ಲಿ ಭೂಸ್ವಾಧೀನದಿಂದ ಕೈಬಿಡಲು ಆದೇಶವಾಗಿರುತ್ತದೆ

6) ಎಂ ಯು ಕಾಮತ್ ಎಂ ಯು ಉಮಾ ಕಾಮತ್ ಬಿ ಎನ್ ಸುಧಾ	2004–05	ಉತ್ತರಹಳ್ಳಿ	88/2 88/3	10–23	ಉತ್ತರಹಳ್ಳಿ ಗ್ರಾಮದ ಸರ್ವೆ ನಂ 88/2 ಮತ್ತು 88/3ರ ಜಮೀನುಗಳಲ್ಲಿ ತೆಂಗು ಮತ್ತು ಮಾವಿನ ತೋಟ ಹಾಗೂ ನರ್ಸರಿಯಿಂದ ಅಭಿವೃದ್ಧಿ ಹೊಂದಿದ್ದು, ಈ ಜಮೀನಿನಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲು ಸಾಧ್ಯವಾಗದ ಕಾರಣಕ್ಕಾಗಿ ಸರ್ಕಾರ ತನ್ನ ಆದೇಶ ಸಂಖ್ಯೆ ಯುಡಿಡಿ 549 ಎಂಎನ್ಎಕ್ಸ್ 2000, ದಿನಾಂಕ 1–9–2004 ಮತ್ತು 29–10–2005 ರಲ್ಲಿ ಭೂಸ್ವಾಧೀನದಿಂದ ಕೈಬಿಡಲು ಆದೇಶವಾಗಿರುತ್ತದೆ
7) ಕೆ ವಿ ನಾರಾಯಣ ಸ್ವಾಮಿ	2005	ಹೊಸಹಳ್ಳಿ	22, 24/1 24/2	10–17	ಹೊಸಹಳ್ಳಿ ಗ್ರಾಮದ ಸರ್ವೆ ನಂ 22,24/1, 24/2 ಜಮೀನುಗಳಲ್ಲಿ ಪ್ರಾಥಮಿಕ ಅಧಿಸೂಚನೆ ಮುಂಚೆ ಭೂಪರಿವರ್ತನೆಯಾ ಗಿರುವುದರಿಂದ ಹಾಗೂ ಈ ಜಮೀನುಗಳ ಸುತ್ತಲಿನ ಜಮೀನುಗಳು

					ಅಧಿಸೂಚನೆಯಾಗಿಲ್ಲದಿರುವುದರಿಂದ ಹಾಗೂ ಯೋಜನೆ _ ಗಡಿ ಭಾಗದಿಂದ ಬರುವುದರಿಂದ ಈ ಜಮೀನಿನಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲು ಸಾಧ್ಯವಾಗದ, ಕಾರಣಕ್ಕಾಗಿ ಸರ್ಕಾರ ತನ್ನ ಆದೇಶ ಸಂಖ್ಯೆಯುಡಿಡಿ 569 ಎಂಎನ್ಎಕ್ಸ್ 2004 ದಿನಾಂಕ 25–10–2005ರಲ್ಲಿ ಭೂಸ್ವಾಧೀನದಿಂದ ಕೈಬಿಡಲು ಆದೇಶವಾಗಿರುತ್ತದೆ
8) ಮೆ ನಾರ್ಲ್ಯಾಂಡ್ ಇನ್ವೆಸ್ಟ್ 2005 ಮೆಂಟ್	2005	ನಾಗವಾರ	60/12	33–07	ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅಪೀಲು ಸಂಖ್ಯೆ 2654/2005 ಮತ್ತಿತರೆ ಪ್ರಕರಣಗಳಲ್ಲಿ ದಿನಾಂಕ 25–1–2005 ರಂದು ಮಾಡಿರುವ ಆದೇಶದಲ್ಲಿ ನಾಗವಾರ ಗ್ರಾಮದ ಸರ್ವೆ ನಂ 60/12 ಮತ್ತಿತರ ಸರ್ವೆ ನಂಬರುಗಳಲ್ಲಿನ ಅರ್ಕಾವತಿ ಬಡಾವಣೆಗೆ

					ಭೂಸ್ವಾಧೀನಪಡಿಸಿ ಕೊಂಡಿರುವ ಜಮೀನಿನ ಪಕ್ರಿಯೆಯನ್ನು ರದ್ದುಪಡಿಸಿರುವುದ ರಿಂದ ಪ್ರಾಧಿಕಾರವು ವಿಷಯ ಸಂಖ್ಯೆ 92/06ರಲ್ಲಿ ದಿನಾಂಕ 31–5–2006 ರ ಸಭೆಯಲ್ಲಿನ ರರಾವಿನಂತೆ ಪ್ರಸ್ತುತ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿಯಿರುವ ಸ್ಪೆಷಲ್ ಲೀವ್ ಪಿಟಿಷನ್ ಮೇಲಿನ ತೀರ್ಮಾನ ಕ್ಕೊಳಪಡಿಸಿ, ಸದರಿ ಸರ್ವೆ ನಂಬರುಗಳಲ್ಲಿನ 33 ಎಕರೆ 07 ಗುಂಟೆ ಜಮೀನನ್ನು ಮುಂದಿನ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲು ತೀರ್ಮಾನಿಸಿದೆ

500 **ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ** ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂವ ಜಿಲ್ಲೆ ಸವದತ್ತಿ ತಾಲ್ಲೂಕಿನ ಯಲ್ಲಮ್ಮನ ಗುಡ್ಡದಲ್ಲಿ ಪ್ರವಾಸೋದ್ಯಮ ಇಲಾಖೆಯ ಪ್ರವಾಸಿ ಮಂದಿರ ನಿರ್ಮಾಣಗೊಂಡರೂ ಪ್ರಾರಂಭವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,